ಈ) ಸಾರಾಯಿಯನ್ನು ರದ್ದುಪಡಿಸುವ ಪ್ರಕ್ರಿಯೆಯ ಬಗ್ಗೆ ಸರ್ಕಾರವು ಗಂಭೀರ ಚಿಂತನೆ ನಡೆಸಿದೆ ಸರ್ಕಾರದ ಮೇಲೆ ಇದರಿಂದಾಗುವ ಸಾಮಾಜಿಕ ಪರಿಣಾಮ ಮತ್ತು ಆರ್ಥಿಕ ಪರಿಣಾಮಗಳಂತಹ ಸಮಸ್ಯೆಗಳನ್ನು ಪರಿಗಣಿಸಿ, ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿದೆ ಸಾರಾಯಿ ರದ್ದುಗೊಳಿಸುವ ವಿಷಯವು ಸರ್ಕಾರದ ಚಿಂತನೆಯಲ್ಲಿದ್ದು ಸಮಾಜದ ಮೇಲೆ ಆಗುವ ಸಾಮಾಜಿಕ ಪರಿಣಾಮ ಮತ್ತು ಸರ್ಕಾರದ ಮೇಲೆ ಆಗುವ ಆರ್ಥಿಕ ಸ್ಥಿತಿಗತಿಗಳ ಪರಿಣಾಮದ ಹಾಗೂ ಇತರೆ ತತ್ಸಂಬಂಧ ಪರಿಣಾಮಗಳ ಬಗ್ಗೆ ವಿವಿಧ ಹಂತಗಳಲ್ಲಿ ಮೌಲ್ಯ ಮಾಪನಗಳನ್ನು ನಡೆಸಿದ ನಂತರ ಅಂತಿಮ ಕ್ರಮ ಕೈಗೊಳ್ಳಲಾಗುವುದು ಸಾರಾಯಿಯ ಬದಲಾಗಿ ಕಡಿಮೆ ಬೆಲೆಯ ಭಾರತೀಯ ತಯಾರಿಕಾ ಮದ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಆದ್ದರಿಂದ, ಈ ಹಂತದಲ್ಲಿ ಈ ಪ್ರಶ್ನೆಗಳಿಗೆ ಸ್ಪಷ್ಟ ಹಾಗೂ ನಿಖರವಾದ ಉತ್ತರ ನೀಡಲು ಸಾಧ್ಯತೆ ಇರುವುದಿಲ್ಲ

ಉ) ಸಾರಾಯಿ ಮಾರಾಟದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸುಮಾರು 30 ರಿಂದ 40 ಸಾವಿರ ತೊಡಗಿಸಿಕೊಂಡಿರಬಹುದೆಂದು ಅಂದಾಜು ಮಾಡಲಾಗಿದೆ

ಊ) ಮತ್ತು ಋ) ಸಾರಾಯಿ ರದ್ದುಗೊಳಿಸುವ ವಿಷಯವು ಸರ್ಕಾರದ ಗಂಭೀರ ಚಿಂತನೆಯಲ್ಲಿದ್ದು ಸಮಾಜದ ಮೇಲೆ ಆಗುವ ಸಾಮಾಜಿಕ ಪರಿಣಾಮ ಮತ್ತು ಸರ್ಕಾರದ ಮೇಲೆ ಆಗುವ ಆರ್ಥಿಕ ಸ್ಥಿತಿಗತಿಗಳ ಪರಿಣಾಮದ ಹಾಗೂ ಇತರೆ ತತ್ಸಂಬಂಧ ಪರಿಣಾಮಗಳ ಬಗ್ಗೆ ವಿವಿಧ ಹಂತಗಳಲ್ಲಿ ಮೌಲ್ಯ ಮಾಪನಗಳನ್ನು ನಡೆಸಿದ ನಂತರ ಅಂತಿಮ ಕ್ರಮ ಕೈಗೊಳ್ಳಲಾಗುವುದು ಆದ್ದರಿಂದ ಈ ಹಂತದಲ್ಲಿ ಈ ಪ್ರಶ್ನೆಗಳಿಗೆ ಸ್ಪಷ್ಟ ಹಾಗೂ ನಿಖರವಾದ ಉತ್ತರ ನೀಡಲು ಸಾಧ್ಯತೆ ಇರುವುದಿಲ್ಲ

752 (1007) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಆನ್‌ಲೈನ್ ಕೇಂದ್ರಗಳ ಸಂಘಗಳೆಷ್ಟು , (ತಾಲ್ಲೂಕುವಾರು ವಿವರ ನೀಡುವುದು) ,

ಆ) ಈ ವರ್ಷದಲ್ಲಿ ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ ,

ಇ) ಹಾಗಿದ್ದಲ್ಲಿ, ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಆನ್‌ಲೈನ್ ಕೇಂದ್ರಗಳ ಸಂಘಗಳು ಅಸ್ತಿತ್ವದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಆದರೆ, ಶಿವಮೊಗ್ಗ ಜಿಲ್ಲೆಯಲ್ಲಿರುವ ಆನ್‌ಲೈನ್ ಲಾಟರಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ

ತಾಲ್ಲೂಕು	ಆನ್‌ಲೈನ್ ಲಾಟರಿ ಸೆಂಟರ್‌ಗಳು
ಶಿವಮೊಗ್ಗ	76
ಭದ್ರಾವತಿ	22
ಸಾಗರ	12
ಹೊಸನಗರ	07
ಶಿಕಾರಿಪುರ	04
ಸೊರಬ	01
ತೀರ್ಥಹಳ್ಳಿ	--
ಒಟ್ಟು	**122**

ಆ) ಸರ್ಕಾರ ಯಾವುದೇ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿಲ್ಲ ಆದರೆ ದಿನಾಂಕ 02 06 2006ರ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಆದೇಶದನ್ವಯ ಹೊರ ರಾಜ್ಯಗಳು ಈ ರಾಜ್ಯದಲ್ಲಿ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿರುವುದರಿಂದ ರಾಜ್ಯ ಸರ್ಕಾರವು ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸದ ವಿನಹ ಈ ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸಲು ಸಾಧ್ಯವಿರುವುದಿಲ್ಲ

ಇ) ರಾಜ್ಯ ಸರ್ಕಾರವು ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಿದ ವಿನಹ ಈ ಆನ್‌ಲೈನ್ ಕೇಂದ್ರಗಳನ್ನು ರದ್ದುಗೊಳಿಸಲು ಸಾಧ್ಯವಿರುವುದಿಲ್ಲ

753 (1112) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಯೋಜನೆಗಳಿಗೆ ಕೇಂದ್ರ ಸರ್ಕಾರವು ಸಹಾಯಾನುದಾನವನ್ನು ಒದಗಿಸುತ್ತಿದೆ , (ಕಳೆದ ಎರಡು ಆರ್ಥಿಕ ವರ್ಷಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುವುದು) ,

ಆ) ಈ ಅವಧಿಯಲ್ಲಿ ವಿವಿಧ ಇಲಾಖೆಗಳಿಗೆ ಬಿಡುಗಡೆಯಾದ ಸಹಾಯಾನುದಾನ ಮತ್ತು ಈ ಅನುದಾನವನ್ನು ಉಪಯೋಗಿಸಿದ ಬಗ್ಗೆ ವಿವರಗಳನ್ನು ಒದಗಿಸುವುದು ,

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯ ಯೋಜನೆ / ಕೇಂದ್ರ ಪುರಸ್ಕೃತ ಯೋಜನೆ / ಕೇಂದ್ರ ವಲಯ ಯೋಜನೆ ಹಾಗೂ ಯೋಜನೇತರದಲ್ಲಿ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳಿಗಾಗಿ ಕೇಂದ್ರದಿಂದ ರಾಜ್ಯಕ್ಕೆ ಹಣ ಬಿಡುಗಡೆಯಾಗುತ್ತದೆ ಕಳೆದ ಎರಡು ವರ್ಷಗಳಲ್ಲಿ ಕೇಂದ್ರದಿಂದ ಸ್ವೀಕೃತವಾದ ಸಹಾಯಾನುದಾನ ಈ ಕೆಳಕಂಡಂತಿದೆ